175

ಡಾ: ಬಗಲಿ ಸಾರ್ವಭೌಮ ಸಾತಗೌಡ(ಇಂಡಿ)

ಶ್ರೀ ಗೋವಿಂದ ಎಂ.ಕಾರಜೋಳ(ಸಣ್ಣ ನೀರಾವರಿ, ಯೋಜನೆ ಹಾಗೂ ಸಾಂಖ್ಯಿಕ ಸಚಿವರು)

ಅ) ಇಂಡಿಯಲ್ಲಿ ಪುರಾತನ ಜಲದಪ್ಪನ ಕೆರೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? ಈ ಕೆರೆಯಲ್ಲಿ ಹೂಳು ತುಂಬಿದ್ದು ಈ ಕೆರೆಯನ್ನು ಸಾರ್ವಜನಿಕರು ಅತಿಕ್ರಮಣ ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಜಲದಪ್ಪನ ಕೆರೆ ಇರುವುದು ಗಮನಕ್ಕೆ ಬಂದಿದೆ. ಈ ಕೆರೆಯನ್ನು ಅತಿಕ್ರಮಣ ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿಲ್ಲ.

ಆ) ಈ ಕೆರೆಯ ಹೂಳು ತೆಗೆದು ಅತಿಕ್ರಮಣವನ್ನು ತಡೆಹಿಡಿಯುವುದಕ್ಕೆ ಕ್ರಮ ಜರುಗಿಸಲಾಗುವುದೆ;

ಇ) ಹಾಗಿದ್ದಲ್ಲಿ, ಈ ಕಾರ್ಯಕ್ರಮ ಎಂದು ಪ್ರಾರಂಭಿಸಲಾಗುವುದು?

ಸದರಿ ಕೆರೆಯಲ್ಲಿನ ಹೂಳು ತೆಗೆಯುವ ಅಂಶವು ಸೇರಿದಂತೆ ಅದರ ಸುಧಾರಣೆಗಾಗಿ 2006–07ನೇ ಸಾಲಿನಲ್ಲಿ 25.00 ಲಕ್ಷ ಅಂದಾಜು ಮೊತ್ತದ ಕಾಮಗಾರಿಯನ್ನು ಕೈಗೊಳ್ಳಲಾಗಿದೆ. ಈ ಮೊತ್ತದಲ್ಲಿ ಹೂಳು ತೆಗೆಯಲು 6.42 ಲಕ್ಷ ಮೊತ್ತ ವೆಚ್ಚ ಮಾಡಿ ಸುಮಾರು 14,400 ಘನ ಮೀಟರ್‌ನಷ್ಟು ಹೂಳು ತೆಗೆಯಲಾಗಿದೆ. ಇನ್ನೂ ಸುಮಾರು 2000 ಘನ ಮೀಟರ್‌ನಷ್ಟು ಹೂಳು ತೆಗೆಯುವ ಕೆಲಸ ಬಾಕಿ ಇದ್ದು, ಅನುದಾನದ ಲಭ್ಯತೆಯ ಅನುಸಾರ ಈ ಕಾರ್ಯ ಕೈಗೊಳ್ಳಲಾಗುವುದು.

ಈ ಕೆರೆಯ ಅತಿಕ್ರಮಣವಾಗಿರುವ ಬಗ್ಗೆ ತಿಳಿಯಲು ಸರ್ವೆ ಕಾರ್ಯ ಕೈಗೊಳ್ಳಲಾಗುವುದು. ಅತಕ್ರಮಣವಾಗಿದ್ದಲ್ಲಿ ಅದರ ತೆರವಿಗೆ ಸೂಕ್ತ ಕ್ರಮ ಜರುಗಿಸಲಾಗುವುದು.

176 ಡಾ:ಬಗಲಿ ಸಾರ್ವಭೌಮ ಸಾತಗೌಡ

ಶ್ರೀ ಗೋವಿಂದ ಎಂ.ಕಾರಜೋಳ(ಸಣ್ಣ ನೀರಾವರಿ, ಯೋಜನೆ ಹಾಗೂ ಸಾಂಖ್ಯಿಕ ಸಚಿವರು)

ಅ) ಬಿಜಾಪೂರ ಜಿಲ್ಲೆಯಲ್ಲಿ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ ಜನಾಂಗದವರ ಜಮೀನುಗಳಿಗೆ ನೀರಾವರಿ ಸೌಲಭ್ಯ ಕಲ್ಪಿಸಲು ಎಷ್ಟು ಹಣ ನಿಗದಿಪಡಿಸಲಾಗಿದೆ;

2009–10ನೇ ಸಾಲಿನಲ್ಲಿ ರೂ.565.00ಲಕ್ಷ ಅಂದಾಜು ಮೊತ್ತದ 32 ಕಾಮಗಾರಿಗಳಿಗಾಗಿ ರೂ.169.50 ಲಕ್ಷ ಅನುದಾನ ಕಲ್ಪಿಸಲು ಪ್ರಸ್ತಾಪಿಸಲಾಗಿದೆ.

ಆ) ಈ ವರ್ಗದ ಜನರ ಅಭಿವೃದ್ಧಿ ಕಾರ್ಯಕ್ರಮಕ್ಕಾಗಿ ಇಂಡಿ ಮತಕ್ಷೇತ್ರಕ್ಕೆ ಎಷ್ಟು ಹಣ ಮೀಸಲಿಡಲಾಗಿದೆ.

ರೂ.135.00ಲಕ್ಷ ಅಂದಾಜು ಮೊತ್ತದ 10 ಕಾಮಗಾರಿಗಳಿಗಾಗಿ ರೂ.40.50ಲಕ್ಷ ಅನುದಾನ ಕಲ್ಪಿಸಲು ಉದ್ದೇಶಿಸಿದೆ.

ಇ) ಇಂಡಿ ಕ್ಷೇತ್ರದಲ್ಲಿ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ ಜನಾಂಗಕ್ಕಾಗಿ ಯಾವ ಹಳ್ಳಿಗಳಲ್ಲಿ ಯಾವ ಯಾವ ಕಾಮಗಾರಿಗಳನ್ನು ಎಷ್ಟು ಎಷ್ಟು ವೆಚ್ಚದಲ್ಲಿ ತೆಗೆದುಕೊಳ್ಳಲು ಉದ್ದೇಶಿಸಲಾಗಿದೆ;

2009–10ನೇ ಸಾಲಿನಲ್ಲಿ ರೂ.565.00ಲಕ್ಷ ಅಂದಾಜು ಮೊತ್ತದ 32 ಕಾಮಗಾರಿಗಳಿಗಾಗಿ ರೂ.169.50ಲಕ್ಷ ಅನುದಾನ ಕಲ್ಪಿಸಲು ಪ್ರಸ್ತಾಪಿಸಲಾಗಿದೆ.

(ರೂ.ಲಕ್ಷಗಳಲ್ಲಿ)

ಕ್ರ.ಸಂ.	ಕಾಮಗಾರಿಯ ಹೆಸರು	ಅಂದಾಜು ಮೊತ್ತ
1	ಜೇವೂರ ಗ್ರಾಮದ ರಿ.ಸ.ನಂ.316/2ಕ್ಕೆ ಏತ ನೀರಾವರಿ ಯೋಜನೆ	10.00
2	ಹಳಗುಣಕಿ ಸ.ನಂ.220ಕ್ಕೆ ನೀರಾವರಿ ಸೌಲಭ್ಯ.	10.00
3	ಹಳಗುಣಕಿ ಸ.ನಂ.245ಕ್ಕೆ ನೀರಾವರಿ ಸೌಲಭ್ಯ.	10.00
4	ಅಹಿರಸಂಗ ಸ.ನಂ.194ಕ್ಕೆ ನೀರಾವರಿ ಸೌಲಭ್ಯ.	15.00
5	ಅಹಿರಸಂಗ ಸ.ನಂ.178ಕ್ಕೆ ನೀರಾವರಿ ಸೌಲಭ್ಯ.	15.00
6	ಮೀರಗಿ ಗ್ರಾಮದ ಪುಂಡಲೀಕ ಮೈಲಾರ ಸಮಗಾರ ಹಾಗೂ ಇತರರಿಗೆ ನೀರಾವರಿ ಸೌಲಭ್ಯ.	15.00
7	ಮೀರಗಿ ಗ್ರಾಮದ ಹಿರೇಗಾವು ಮುಂಡೇವಾಡಿ ಹಾಗೂ ಇತರರಿಗೆ ನೀರಾವರಿ ಸೌಲಭ್ಯ.	15.00
8	ಮೀರಗಿ ಗ್ರಾಮದ ಶಿವಪ್ಪ ಸಂಗಪ್ಪ ಪ್ಯಾಟಿ ಹಾಗೂ ಇತರರಿಗೆ ನೀರಾವರಿ ಸೌಲಭ್ಯ	15.00
9	ಮೀರಗಿ ಗ್ರಾಮದ ಜೀವಣ್ಣ ಸಂಗಪ್ಪ ತಳಕೇರಿ ಹಾಗೂ ಇತರರಿಗೆ ನೀರಾವರಿ ಸೌಲಭ್ಯ.	15.00
10	ಮೀರಗಿ ಗ್ರಾಮದ ಶಿವಪ್ಪ ಹಿರಗೆಪ್ಪ ಹಾಗೂ ಇತರರಿಗೆ ನೀರಾವರಿ ಸೌಲಭ್ಯ.	15.00

ಈ) ಈ ಕಾಮಗಾರಿಗಳನ್ನು ಎಂದು ಕೈಗೆತ್ತಿಕೊಳ್ಳಲಾಗುವುದು?

ಕಾಮಗಾರಿಗಳ ಕ್ರಿಯಾ ಯೋಜನೆ ಪ್ರಕ್ರಿಯೆ ಜಾರಿಯಲ್ಲಿದೆ. ಕ್ರಿಯಾ ಯೋಜನೆ ಅನುಮೋದನೆಗೊಂಡ ನಂತರ ನಿಯಮಾನುಸಾರ ಕಾಮಗಾರಿಗಳನ್ನು ಕೈಗೊಳ್ಳಲಾಗುವುದು.